# ಕೊಳಲ ಗಾರುಡಿ




ಗುಜರಾತಿ ಮೂಲ: **ಪನ್ನಾಲಾಲ್ ಪಟೇಲ್**
ಕನ್ನಡಕ್ಕೆ: **ಬಿ.ಜಿ. ಕನಕೇಶಮೂರ್ತಿ**
ಕಲೆ: ಆದಿಸ್ವರೂಪ

ಜಾತ್ರೆ ಇನ್ನೇನು ಮುಗಿಯುತ್ತಾ ಬಂದಿದೆ. ಸೆಪ್ಟೆಂಬರ್ ತಿಂಗಳ ಮೋಡಗಳು ಬಣ್ಣಗಳಿಂದ ಕೂಡಿದ್ದವು. ಅಂತೆಯೇ ರಂಗುರಂಗಿನ ಬಟ್ಟೆಗಳನ್ನು ಉಟ್ಟಿರುವ ತರುಣ-ತರುಣಿಯರು ತಮ್ಮ ತಮ್ಮ ಊರುಗಳಿಗೆ ವಾಪಸ್ಸಾಗುವ ಕಡೆಯ ಗಳಿಗೆಯಲ್ಲಿ ತುಂಬಾ ಉತ್ಸುಕರಾಗಿ, ತಮಾಷೆ ಮಾಡುತ್ತ ವಿನೋದದಲ್ಲಿ ಮುಳುಗಿದ್ದರು.

ಆಕಾಶದಲ್ಲಿ ಹಾಗೂ ಭೂಮಿಯ ಮೇಲಿನ ಚಲನವಲನಗಳು ಬೇರೆ ಬೇರೆಯಾಗಿದ್ದವು. ಜಾತ್ರೆಗೆಂದು ಬಂದ ಜನರು ಒಂದು ದಿಕ್ಕಿನತ್ತ ಹೊರಟಿದ್ದರೆ, ಆಕಾಶದಲ್ಲಿನ ಮೋಡಗಳು ಬೇರೊಂದು ದಿಕ್ಕನ್ನು ಹಿಡಿದಿದ್ದವು.

ದೂರದಲ್ಲೊಂದು ಜೋಡಿ ಒಂದು ಮೂಲೆಯಲ್ಲಿ ತುಂಬಾ ಹೊತ್ತಿನಿಂದ ಏನೋ ಮಾತುಕತೆಯಲ್ಲಿ ತೊಡಗಿರುವುದನ್ನು ನೋಡಿದರೆ, ನಿಶ್ಚಿತವಾಗಿ ಎಲ್ಲಕ್ಕೂ ವಿರುದ್ಧ ದಿಕ್ಕಿನತ್ತ ಸಾಗಲು ನಿರ್ಧರಿಸಿದ್ದರು ಎಂದು ಕಾಣುವುದರಲ್ಲಿ ಯಾವ ಅನುಮಾನವೂ ಬರುತ್ತಿರಲಿಲ್ಲ.

ಆ ಯುವತಿಯ ಕಣ್ಣುಗಳು ಕಂಬನಿದುಂಬಿದ್ದವು. ಆ ಯುವಕ ತನ್ನ ಕೋಲಿಗೆ ಒರಗಿ ಕುಳಿತಿರುವ ಭಂಗಿ ದುಗುಡದ ಚಿತ್ರಣವನ್ನು ಕಟ್ಟಿಕೊಡುತ್ತಿತ್ತು.

'ನನ್ನ ಅತ್ತೆ ಒಂದು ಬೆಕ್ಕಿನ ಬಗ್ಗೆ ಒಂದಿಷ್ಟೂ ಯೋಚಿಸುವುದಿಲ್ಲ, ಆದರೆ ನನ್ನ ಬಗ್ಗೆ ಮಾತ್ರ ತುಂಬಾ ತಲೆಕೆಡಿಸಿಕೊಳ್ತಾಳೆ. ಅವಳು 'ಕೊತ್ಲಾ'ದಲ್ಲಿ(ಮರದ ಪೆಟ್ಟಿಗೆ) ಒಂದಿಷ್ಟು ರೊಟ್ಟಿಗಳು, ಒಂದು 'ಕಂಧಿ'(ತೊವ್ವೆ)ಯ ಕುಡಿಕೆಯನ್ನು ಇಟ್ಟಿರ್ತಾಳೆ. ಅದರಲ್ಲಿ ತುಪ್ಪದ 'ವಧಿ'(ಮಿಳ್ಳೆ)ಯನ್ನೇನಾದರೂ ಅಪ್ಪಿತಪ್ಪಿ ಇಟ್ಟಿದ್ದರೆ, ಅದರಲ್ಲಿ ಏನಾದರೂ ಒಂದಿಷ್ಟು ಕಡಿಮೆಯಾದೀತೋ ಇಲ್ಲವೋ ಎಂದು ತಿಳಿಯಲು ಅದರ ಮೇಲೆ ಗುರುತು ಮಾಡಿರ್ತಾಳೆ. ಇಷ್ಟೆಲ್ಲಾ ಎಚ್ಚರಿಕೆ ವಹಿಸಿದ್ದರೂ ಅತ್ತಿಂದಿತ್ತ ಸುಳಿದಾಡುತ್ತಿರ್ತಾಳೆ. ಬೆಕ್ಕು ಕೂಡ ಇಲಿಗಳ ಮೇಲೆ ಅಷ್ಟೊಂದು ದ್ವೇಷ ಸಾಧಿಸುವುದಿಲ್ಲ. ಏನಾದರೂ ಇಲಿಗಳಿಂದಲೋ ಅಥವಾ ಬೆಕ್ಕಿನಿಂದಲೋ ತುಪ್ಪದ 'ವಧಿ' ಸ್ವಲ್ಪ ಆ ಕಡೆ ಈ ಕಡೆ ಜರುಗಿದ್ದರೆ ಸಾಕು, ಅವಳು ಇಡೀ ಊರೇ ಕೇಳುವಂತೆ ನನ್ನ ಮೇಲೆ ಶಾಪ ಹಾಕಿಕೊಂಡು ತಿರುಗುವುದನ್ನು ನೀನೂ ನೋಡಿರಬಹುದು.'

'ನಾನೆಲ್ಲೋ ಬೀದಿ ಬೀದಿ ಅಲೆಯುವ ದನ ಅಂದ್ಕೊಂಡು ನನ್ನ ಗಂಡನೂ ಸಹಿತ ನನ್ನ ಮೇಲೆ